ಅದೂ ಇಂತಾವಾ! ಇನ್ನ, ಮಂದಿಗೆ ನಾ ಏನ ಹೇಳಲಿ? ನನಗ ಐದು ಹೆಣ್ಣುಮಕ್ಕಳು ಇದ್ದಾರಂತ ಹೇಳಲೇನು?"

ತಾಯಿ ಅಳುತ್ತ ಒಳಗೆ ಹೋದಳು. ನಾನಾಸಾಹೇಬ ವೈದ್ಯರು ನಮಸ್ಕಾರ ಮಾಡಿ ಹೋದರು. ದಾದಾ, ತಿರಸ್ಕಾರದಿಂದ ರಘುವಿನ ಕಡೆಗೆ ನೋಡಿ ತಲೆ ಅಲ್ಲಾಡಿಸಿದರು. ರಘು ಕಂಗಾಲಾದ.

'ಐದು ಹುಡುಗಿಯರು ಅಂದ್ರ? ನಾನು ಹುಡುಗಿ ಇದ್ದೀನೇನು? ಸಾಲೀ ಹುಡುಗರು ಅನ್ನೂದರಾಗ ಖರೆ ಅದ ಏನು? ನಾನು ನೋಡಲಿಕ್ಕೆ ಛಂದ ಕಾಣಸ್ತೀನಿ. ಹುಡುಗ್ಯಾರಂಗ ಮಾತಾಡ್ತಿನಿ... ಅಂದ್ರ ನಾನು ಹೆಂಗಸ ಇದ್ದೀನೇನು? ಸುಶೀಲತ್ತಿ ಎಲ್ಲೆ ಇದ್ದಿ? ಲಗೂನೆ ಮನೀಗೆ ಬಾ!'

ರಘುವಿನ ಎದೆಯ ಬಡಿತ ಹೆಚ್ಚಾಗುತ್ತಿತ್ತು. ರಘು ಅಂಗಣದಲ್ಲಿಯೇ ಕುಸಿದು ಬಿದ್ದ.

ಆಮೇಲೆ ರಘುವಿನ ಸೋದರತ್ತೆ ನಿಜವಾಗಿಯೂ ಬಂದಳು! ಅತ್ತೆಮನೆಯಲ್ಲಿ ಒಂದೂವರೆ ವರ್ಷ ಸಾಕಷ್ಟು ಕಷ್ಟಗಳನ್ನು ಸಹಿಸಿ ಹೇಗೋ ಜೀವನ ಕಳೆದಿದ್ದಳು. ಇಲ್ಲಿ ಬಂದು ಗಂಡನನ್ನು ನುಂಗಿದಳು ಎಂದು ಅತ್ತೆಮನೆಯವರು ಆಪಾದನೆ ಹೊರಿಸಿ ಆಕೆಯನ್ನು, ತವರು ಮನೆಗೆ ತಂದು ಬಿಟ್ಟಿದ್ದರು.

ಅತ್ತೆಯ ಹಣೆ ಬರಿದಾಗಿ ಬೆಳ್ಳಗೆ ಕಾಣಿಸುತಿತ್ತು. ಆಕೆಯ ಮುಖದ ಮೇಲಿನ ಸೌಂದರ್ಯದಲ್ಲಿ ಇನಿತೂ ಕಡಿಮೆ ಆಗಿರಲಿಲ್ಲ. ಮೊದಲೇ ಲಾವಣ್ಯವತಿ ಆಗಿದ್ದ ಅವಳು ಈಗ ರಸ ತುಂಬಿದ ಹಣ್ಣಿನಂತೆ ಆಗಿದ್ದಳು. ನೋಡುವವರ ಎರಡು ಕಣ್ಣುಗಳು ತುಂಬುವಂತೆ ಮಾರ್ದವ ಮೈಕಟ್ಟು... ಮೊದಲು ಅತ್ತೆ, ಪರಕಾರ ಹಾಕಿಕೊಂಡ ಹುಡುಗಿಯಂತೆ ಕಾಣಿಸುತ್ತಿದ್ದಳು. ಒಮ್ಮೆಲೆ ಈಗ ಆಕೆ ಹರೆಯ ಉಕ್ಕಿ ಹರಿಯುವ ಹೆಂಗಸಿನಂತೆ ಕಾಣಿಸತೊಡಗಿದಳು.

ಅತ್ತೆ ಇರುವ ವ್ಯವಸ್ಥೆಯನ್ನು ದಾದಾ ಮಹಡಿಯ ಮೇಲೆ ಮಾಡಿದ್ದ. ಈಗ ಮನೆಯಲ್ಲಿ ಆಕೆ ಸೆರಗಿನಲ್ಲಿ ಇಟ್ಟುಕೊಂಡ ಕೆಂಡದಂತೆ ಆಗಿದ್ದಳು.

ಯುವ ತರುಣರು, "ಅತ್ಯಾಬಾಯಿ, ಸ್ವಲ್ಪ ಕುಡೀಲಿಕ್ಕೆ ನೀರು ಕೊಡ್ರಿ. ಈ ಬಿಸಿಲು ತಡಕೊಳ್ಳಿಕ್ಕೆ ಆಗೋಲ್ಲು.'' ಎನ್ನುತ್ತ ಮನೆಯ ಸುತ್ತಮುತ್ತ ಸುಮ್ಮನೆ ಅಡ್ಡಾಡತೊಡಗಿದರು. ಉಡಾಳರು ಮನಿಗೆ ಬಂದು ಠಳಾಯಿಸತೊಡಗಿದರು. ಎಂದಿಗೂ ಮನೆಯ ಕಡೆಗೆ ಹಣಿಕಿ ಹಾಕದ ದಿಘೆ ವಕೀಲ ಮನೆಯ ಕಡೆಗೆ ಚಕ್ಕರ ಹಾಕತೊಡಗಿದ. ಊರತುಂಬ ಆತ ಕಚ್ಚೆಹರಕ ಎಂದು ಪ್ರಸಿದ್ಧನಾಗಿದ್ದ.

"ಸುಶೀಲಾ ಬಂದಾಳೇನು? ಸುಮ್ಮನ ಚೌಕಶಿ ಮಾಡಬೇಕಂತ ಬಂದಿದ್ದೆ." ಗಿರಿಗಿರಿ ತಿರುಗುತ್ತಿರುವ ತನ್ನ ಹಸಿದ ಕಣ್ಣುಗಳಿಂದ ಮಹಡಿಯ ಕಡೆಗೆ ನೋಡುತ್ತಿದ್ದ. ದಾದಾ ಅವರಿಗೆ ಇದೊಂದು ತಲೆ ನೋವಾಯಿತು. ಏನು ಮಾಡಬೇಕೆಂಬುದು ತಿಳಿಯಲಿಲ್ಲ. ಅತ್ತೆಯ ಜೊತೆಗೆ ಓರ್ವ ವ್ಯಕ್ತಿ ಇರುವುದು ಅವಶ್ಯವೆನಿಸಲಾರಂಭಿಸಿತು. ಕೊನೆಗೆ, ರಘುವಿಗೆ ಅತ್ತೆಯನ್ನು ನೋಡಿಕೊಳ್ಳುವ ಜವಾಬ್ದಾರಿ ವಹಿಸಿಕೊಡಲಾಯಿತು. 'ಕುರುಡ ಬೇಡಿದ್ದು ಒಂದು ಕಣ್ಣು, ಆದರೆ ದೇವರು ಕೊಟ್ಟದ್ದು ಎರಡು ಕಣ್ಣು' ಎಂಬಂತೆ ಆಯಿತು. ಮಾಯೆ, ಮಮತೆ ಮತ್ತು ಅಂತಃಕರಣಕ್ಕಾಗಿ ರಘು ಹಪಹಪಿಸುತ್ತಿದ್ದ. ಇಷ್ಟು ದಿನ ಏಕಾಂಗಿ ಆಗಿದ್ದ ರಘು ಈಗ ಮತ್ತೆ ಅತ್ತೆಯನ್ನು ಅಂಟಿಕೊಂಡ. ಆದರೆ, ಅತ್ತೆಗೆ ಒಮ್ಮೊಮ್ಮೆ ಬಹಳ ನೋವಾಗುತ್ತಿತ್ತು. ಮಾನಸಿಕವಾಗಿ ಆಕೆ ಕುಗ್ಗಿ ಹೋಗಿದ್ದಳು.

'ಈ ಒಂದೂವರೆ ವರ್ಷದಾಗ ಏನೇನು ಆಗಿ ಹೋತು? ನನ್ನ ಸಂಸಾರವೊ ಮೂರಾಬಟ್ಟೆ ಆಯಿತು. ನನ್ನದೊಂದು ನಮೂನಿ, ರಘುವಿನದು ಒಂದು ನಮೂನಿ! ಹದಿನೆಂಟು ತಿಂಗಳದಾಗ ಹೆಣ್ಣುಹುಡಗ್ಯಾರು ಎಷ್ಟ ಬೆಳದಾರ? ಹುಡುಗ್ಯಾರ ಬೆಳವಣಿಗೆ ಬಹಳ ಲಗೂನ ಆಗ್ತದ. ಹೌದು... ಆದರ ರಘುನದು? ಮುಂದ ಹ್ಯಾಂಗೋ ಏನೋ?'

ರಘುವಿನ ಎಲ್ಲ ವ್ಯವಸ್ಥೆಯನ್ನು ಅತ್ತೆ, ಮಹಡಿಯ ಮೇಲೆ ಮಾಡಿದಳು. ಮತ್ತೆ ಅವನ ಊಟ ತಿಂಡಿ, ಅಭ್ಯಾಸ, ಮಲಗುವುದು, ಈ ಎಲ್ಲ ಜವಾಬ್ದಾರಿ ಅತ್ತೆ ವಹಿಸಿಕೊಂಡಳು. ಈಗ ಅತ್ತೆ ಎಲ್ಲಿಯೋ,